ಸ್ಥಾಪನೆ: ರಿ.ನಂ.ಎಸ್–101/71–72 ದೂರವಾಣಿ:22447067

# ಭಾರತ್ ವಿದ್ಯಾ ಸಂಸ್ಥೆ (ರಿ)

ನಂ 27, 16ನೇ ಮುಖ್ಯ ರಸ್ತೆ, 4 ನೇ ಬ್ಲಾಕ್, ಜಯನಗರ, ಬೆಂಗಳೂರು–560 011.

Website: www.besinstitutions.edu.in email: besinstitution@yahoo.in

## ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನಾ ಪತ್ರ

ರಾಜ್ಯದಲ್ಲಿ ಕೋವಿಡ್–19, ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿರುವುದರಿಂದ ಸಹಕಾರಿ ಸಂಘಗಳು/ ಸೌಹಾರ್ದ ಸಹಕಾರಿಗಳ ವಾರ್ಷಿಕ ಮಹಾಸಭೆಯನ್ನು ವೀಡಿಯೋ ಕಾನ್ಫರೆನ್ಸ್/ವರ್ಚುಯಲ್ ಮೀಟಿಂಗ್ (**Video Conference/Virtual Meeting)** ಮೂಲಕ ನಡೆಸಲು ಸರ್ಕಾರದ ಆದೇಶ ಸಂಖ್ಯೆ ಸಿಇ 43 ಸಿಎಲ್ಎಮ್ 2020 (ಇ) ಬೆಂಗಳೂರು, ದಿನಾಂಕ 21.10.2020ರ ಮಾರ್ಗಸೂಚಿಗಳನ್ನು ಮತ್ತು ಕೋವಿಡ್–19 ನಿರ್ವಹಣೆಗಾಗಿ ಹೊರಡಿಸಿದ ರಾಷ್ಟ್ರೀಯ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತುಗೊಳಪಟ್ಟು ಇದೊಂದು ವಿಶೇಷ ಪ್ರಕರಣ ಎಂದು ಪರಿಗಣಿಸಿ ಸರ್ವ ಸದಸ್ಯರ ವಾರ್ಷಿಕ ಸಭೆಯನ್ನು ವೀಡಿಯೋ ಕಾನ್ಫರೆನ್ಸ್/ವರ್ಚುಯಲ್ ಮೀಟಿಂಗ್ (**Video Conference/Virtual Meeting)** ಮೂಲಕ ನಡೆಸಲು 2020 ಅವಧಿಗೆ ಮಾತ್ರ ಅನ್ವಯಿಸಲಾಗಿದೆ ಎಂದಿರುವ ಕರ್ನಾಟಕ ಸರ್ಕಾರದ ಆದೇಶದ ಅನುಸಾರ ಭಾರತ್ ವಿದ್ಯಾ ಸಂಸ್ಥೆಯ 2019–20ನೇ ಸಾಲಿನ 48ನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ವೀಡಿಯೋ ಕಾನ್ಫರೆನ್ಸ್/ವರ್ಚುಯಲ್ ಮೀಟಿಂಗ್ (Video Conference /Virtual Meeting) ದಿನಾಂಕ 23.12.2020 ರಂದು ಬುಧವಾರ ಬೆಳಿಗ್ಗೆ 10.30 ಘಂಟೆಗೆ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಟಿ.ಸೋಮಶೇಖರ್‌ರವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿರುತ್ತದೆ. ಗೌರವಾನ್ವಿತ ಸದಸ್ಯರುಗಳಾದ ತಾವುಗಳು ಕಾರ್ಯಸೂಚಿಯಲ್ಲಿ ಸೂಚಿಸಿರುವ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ವೀಡಿಯೋ ಕಾನ್ಫರೆನ್ಸ್/ವರ್ಚುಯಲ್ ಮೀಟಿಂಗ್ (**Video Conference /Virtual Meeting)** ಸಭೆಗೆ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ನೀಡುವ ಸಭೆಯ ಲಿಂಕನ್ನು ಒತ್ತಿ ಚಾಟ್ ಬಾಕ್ಸ್‌ನಲ್ಲಿ ತಮ್ಮ ಹೆಸರು, ಸದಸ್ಯತ್ವದ ಸಂಖ್ಯೆ ಮತ್ತು ದೂರವಾಣಿ ಸಂಖ್ಯೆಯನ್ನು ನಮೂದಿಸಿ ಭಾಗವಹಿಸುವಂತೆ ಈ ಮೂಲಕ ಕೋರಿದೆ.

**(Video Conference / Virtual Meeting Link:**

**www.besinstitutions.edu.in**

# <u>ಕಾರ್ಯಸೂಚಿ</u>

1. ಪ್ರಾರ್ಥನೆ
2. ಸ್ವಾಗತ
3. 2019–20 ನೇ ಸಾಲಿನಲ್ಲಿ ದೈವಾಧೀನರಾದ ಸಂಸ್ಥೆಯ ಸದಸ್ಯರುಗಳಿಗೆ ಸಂತಾಪ ಸೂಚಿಸುವುದು.
4. ಸರ್ವ ಸದಸ್ಯರ ಸಭೆಯ ಸೂಚನೆಯನ್ನು ಓದಿ ದಾಖಲು ಮಾಡುವುದು.
5. ದಿನಾಂಕ 30.12.2018 ರಂದು ನಡೆದ 47 ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡುವುದು.
6. 2019–20 ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವುದು.
7. 2019– 20ನೇ ಸಾಲಿನ ಆಯವ್ಯಯಗಳಲ್ಲಿನ ಅಂದಾಜು ವೆಚ್ಚಕ್ಕಿಂತ ಹೆಚ್ಚುವರಿ ಆಗಿರುವ ಖರ್ಚನ್ನು ಅನುಮೋದಿಸುವುದು.
8. ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ 2019–20 ನೇ ಸಾಲಿನ ಲೆಕ್ಕಪತ್ರಗಳ ಪರಿಶೀಲನೆ ಹಾಗೂ ಲೆಕ್ಕಪರಿಶೋಧನಾ ವರದಿಯಲ್ಲಿನ ನ್ಯೂನತೆಗಳಿಗೆ ಆಡಳಿತ ಮಂಡಳಿ ನೀಡಿರುವ ಸಮಜಾಯಿಷಿಗಳ ಪರಿಶೀಲನೆ ಮತ್ತು ಅಂಗೀಕಾರ.
9. 2019–20ನೇ ಸಾಲಿನ ವಾಸ್ತವ ಆಯವ್ಯಯಕ್ಕೆ ಅಂಗೀಕಾರ ಮತ್ತು ಮಂಜೂರಾದ ಅಂದಾಜು ವೆಚ್ಚಕ್ಕಿಂತ ಹೆಚ್ಚಾಗಿ ಖರ್ಚಾಗಿರುವುದನ್ನು ಅನುಮೋದಿಸುವುದು ಮತ್ತು ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಗೆ ನೀಡಿರುವ ಅನುಪಾಲನಾ ವರದಿ ಪರಿಶೀಲಿಸಿ ಅಂಗೀಕರಿಸುವುದು. 2020–21ನೇ ಸಾಲಿನ ಅಂದಾಜು ಆಯ–ವ್ಯಯಗಳನ್ನು ಮಂಜೂರು ಮಾಡುವುದು.
10. 2021–22 ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ನೇಮಕ ಮಾಡುವುದು.
11. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.
12. ವಂದನಾರ್ಪಣೆ

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ

ಸ್ಥಳ: ಬೆಂಗಳೂರು
ದಿನಾಂಕ: 02.12.2020

ಎಂ. ಕೃಷ್ಣದಾಸ್
ಕಾರ್ಯದರ್ಶಿ

## <u>ಸೂಚನೆಗಳು:</u>

1. ಈ ಸಾಲಿನ ವಾರ್ಷಿಕ ಮಹಾಸಭೆಯನ್ನು ಸರ್ಕಾರದ ಆದೇಶದಂತೆ ವೀಡಿಯೋ ಕಾನ್ಫರೆನ್ಸ್ / ವರ್ಚುಯಲ್ ಮೀಟಿಂಗ್ (**Video Conference / Virtual Meeting**) ಮುಖಾಂತರ ನಡೆಸುತ್ತಿರುವುದರಿಂದ ಭಾಗವಹಿಸುವ ಸದಸ್ಯರು ಮೀಟಿಂಗ್ ಲಿಂಕನ್ನು ಒತ್ತಿ ಆನಂತರ ಚಾಟ್ ಬಾಕ್ಸ್‌ನಲ್ಲಿ ತಮ್ಮ ಹೆಸರು, ಸದಸ್ಯತ್ವದ ಸಂಖ್ಯೆ ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ದಾಖಲಿಸಬೇಕಾಗಿ ವಿನಂತಿ.
2. ಸಂಸ್ಥೆಯ 2019–20 ನೇ ಸಾಲಿನ ಆಡಳಿತ ವರದಿಯನ್ನು ಸಂಸ್ಥೆಯ ಆಡಳಿತ ಕಛೇರಿಯಲಿ ದಿನಾಂಕ :17.12.2020ರ ನಂತರ ಪಡೆಯುವುದು.
3. ಸಂಸ್ಥೆಯ ವೆಬ್ ಸೈಟ್ **www.besinstitutions.edu.in** ನಲ್ಲಿ ಸರ್ವ ಸದಸ್ಯರ ಸಭೆಯ ಸೂಚನಾ ಪತ್ರವನ್ನು ವೀಕ್ಷಿಸಬಹುದು.
4. ಸಂಸ್ಥೆಯ 2019–20 ನೇ ಸಾಲಿನ ಅಡಳಿತ ವರದಿ, ಲೆಕ್ಕಪತ್ರಗಳ ತ:ಖ್ತೆ ಬಗ್ಗೆ ಸ್ಪಷ್ಟೀಕರಣ ಬಯಸಿದಲ್ಲಿ ಹಾಗೂ ತಮ್ಮ ಸಲಹೆ /ಸೂಚನೆಗಳನ್ನು ಸಭೆಯಲ್ಲಿ ಮಂಡಿಸಲು ಇಚ್ಛಿಸುವ ಸದಸ್ಯರು ಸಭೆಗೆ 7 ದಿನಗಳ ಮುಂಚಿತವಾಗಿ (ದಿನಾಂಕ 19.12.2020ರಂದು ಸಂಜೆ 4.00 ಘಂಟೆಯ ಒಳಗಾಗಿ) ಲಿಖಿತ ಪತ್ರದ ಮೂಲಕ ಸಂಸ್ಥೆಯ ಕಾರ್ಯದರ್ಶಿಯವರಿಗೆ ತಲುಪಿಸುವುದು.
5. ಸದಸ್ಯರ ವಿಳಾಸದಲ್ಲಿ ಬದಲಾವಣೆಯಾಗಿದ್ದಲ್ಲಿ ಕೂಡಲೆ ಸಂಸ್ಥೆಗೆ ಬರೆದು ತಿಳಿಸುವುದು.
6. ಈ ಸಾಲಿನ ವಾರ್ಷಿಕ ಮಹಾಸಭೆಯನ್ನು ಸರ್ಕಾರದ ಆದೇಶದಂತೆ ವೀಡಿಯೋ ಕಾನ್ಫರೆನ್ಸ್ / ವರ್ಚುಯಲ್ ಮೀಟಿಂಗ್ (**Video Conference / Virtual Meeting**) ಮುಖಾಂತರ ನಡೆಸುತ್ತಿರುವುದರಿಂದ ಲಿಖಿತ ಮೂಲಕ ಸಲ್ಲಿಸಲಾಗುವ ಸಲಹೆ/ ಸೂಚನೆಗಳನ್ನು ಮಾತ್ರ ಪರಿಗಣಿಸಲಾಗುವುದು
7. ಸಭೆ ನಡೆಯುವ ಸಂದರ್ಭದಲ್ಲಿ (**Video Conference / Virtual Meeting**) ಪರದೆಯಲ್ಲಿ ಕಾಣಿಸುವಂತಹ (**Chat Box**) ಸಂದೇಶದ ಮೂಲಕ ತಮ್ಮ ಸಲಹೆ /ಸೂಚನೆ / ಅಭಿಪ್ರಾಯಗಳನ್ನು ತಿಳಿಸುವುದು.
8. ಸದಸ್ಯರು 5 ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ 3 ಸಭೆಗಳಿಗೆ ಹಾಜರಾಗದಿದ್ದಲ್ಲಿ ಸಾಮಾನ್ಯ ಸಭೆಯಲ್ಲಿ ಮತ ನೀಡುವ, ಆಡಳಿತ ಮಂಡಳಿ ಚುನಾವಣೆಯಲ್ಲಿ ಮತ ಚಲಾಯಿಸುವ ಮತ್ತು ಸ್ಪರ್ಧಿಸುವ ಹಕ್ಕನ್ನು ಕಳೆದುಕೊಳ್ಳುತ್ತಾರೆ.
9. ಇನ್ನೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಆಡಳಿತ ಕಚೇರಿಯಲ್ಲಿ ಖುದ್ದಾಗಿ ಅಥವಾ ದೂರವಾಣಿ ಮುಖಾಂತರ (ದೂ: 22447067) ಮಾಹಿತಿ ಪಡೆಯಲು ವಿನಂತಿ.

### <u>ಆಡಳಿತ ಕಚೇರಿಯ ವ್ಯವಹಾರದ ವೇಳೆ.</u>

**ಸೋಮವಾರದಿಂದ – ಶುಕ್ರವಾರ / ಬೆಳಗ್ಗೆ 10.00 ರಿಂದ ಸಂಜೆ 5.00ರವರೆಗೆ.**

**ಶನಿವಾರ ಬೆಳಗ್ಗೆ 10.00 ರಿಂದ 2.00 ಘಂಟೆಯವರೆಗೆ.**

**ಭಾನುವಾರ ರಜಾದಿನ**

**48ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನಾ ಪತ್ರ**

**2019–20**

**ದಿನಾಂಕ: 23.12.2020 ಬುಧವಾರ ಬೆಳಿಗ್ಗೆ 10.30 ಗಂಟೆಗೆ ಭಾರತ್ ವಿದ್ಯಾಸಂಸ್ಥೆಯಲ್ಲಿ ನಡೆಸಲಾಗುತ್ತದೆ.**

**Virtual Meeting / Video Conference**

**ಮೂಲಕ ಸಭೆ ನಡೆಸಲಾಗುತ್ತದೆ.**